ಆ) ಗಣಿಗಾರಿಕೆಯಿಂದ ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು ಎಷ್ಟು ಗಣಿಗಾರಿಕೆ ಪಟ್ಟ ಮತ್ತು ಸರ್ಕಾರಿ ಗಣಿಗಾರಿಕೆ ಇವೆ, ವಿವರ ನೀಡುವುದು; ಇವುಗಳಿಂದ ಕಳೆದ ವರ್ಷ ಸರ್ಕಾರಕ್ಕೆ ಬಂದಂತಹ ಆದಾಯವೆಷ್ಟು; ಮತ್ತು ಬಾಕಿ ಎಷ್ಟು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು):

ಅ) ನಿಷೇಧಿತ ಪ್ರದೇಶದಲ್ಲಿ ಇಲ್ಲ.

ಆ) ಚಾಮರಾಜನಗರ ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ಗಣಿ ಪ್ರದೇಶಗಳ ವಿವರ:

	ಸರ್ಕಾರಿ	ಪಟ್ಟಾ	ಒಟ್ಟು
ಕಪ್ಪುಶಿಲೆ	32	42	74
ಕಟ್ಟಡದ ಕಲ್ಲು ಮರಳು, ಇಟ್ಟಿಗೆ ಮಣ್ಣು, ಸುಣ್ಣದ ಕಲ್ಲು	63	02	65

ಬೇಡಿಕೆ ರೂ. 4,20,35,000–00

ವಸೂಲಾತಿ ರೂ. 4,13,95,000–00

ಬಾಕಿ ರೂ. 6,40,000–00

ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದವರಿಗೆ ಮಂಜೂರಾದ ಕೊಳವೆಬಾವಿಗಳು

3085 (3793) : ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 35 ವರ್ಷಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಎಸ್.ಸಿ/ಎಸ್.ಟಿ ಕಾರ್ಪೊರೇಷನ್ ನಿಂದ ಮಂಜೂರಾಗಿರುವ ಸಾಮೂಹಿಕ ಮತ್ತು ವೈಯಕ್ತಿಕ ಬೋರ್‌ವೆಲ್‌ಗಳ ವಿವರಗಳನ್ನು ನೀಡುವುದು?

ಆ) ಈ ವರ್ಷ ಎಷ್ಟು ಬೋರ್‌ವೆಲ್‌ಗಳನ್ನು ಮಂಜೂರು ಮಾಡಲಾಗಿದೆ; ಕಳೆದ ಸಾಲಿನಲ್ಲಿ ಬೋರ್‌ವೆಲ್ ಕೊರೆದು ವಿದ್ಯುತ್ ಸಂಪರ್ಕ ಪೂರ್ಣಗೊಂಡಿರುವುದರ ಸಂಖ್ಯೆ ಎಷ್ಟು ವಿವರ ನೀಡುವುದು;

ಇ) ಬೋರ್ ವೆಲ್ ಕೊರೆಯುವ ಯಂತ್ರ ಹಾಗೂ ಇತರ ವಿದ್ಯುತ್ ಉಪಕರಣಗಳನ್ನು ಕೇಂದ್ರ ಕಚೇರಿಯಿಂದ ಒದಗಿಸುತ್ತಿದ್ದು ಈ ಯೋಜನೆ ಕಾಲ ಮಿತಿಯಲ್ಲಿ ಕೆಲಸ ಕಾರ್ಯಗಳು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಈ ವ್ಯವಸ್ಥೆಯನ್ನು ಸರಿಪಡಿಸಲು ಕೈಗೊಂಡ ಕ್ರಮಗಳೇನು; ವಿವರ ನೀಡುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ವೈಯಕ್ತಿಕ ನೀರಾವರಿ ಕೊಳವೆಬಾವಿಯನ್ನು 1984–85 ನೇ ಸಾಲಿನಿಂದ ಅನುಷ್ಠಾನ ಗೊಳಿಸುತ್ತಿದೆ. ಹಾಗೂ ಸಾಮೂಹಿಕ ನೀರಾವರಿ ಕೊಳವೆ ಬಾವಿ ಯೋಜನೆಯು 1995–96ನೇ ಸಾಲಿನಿಂದ ಅನುಷ್ಠಾನಗೊಳಿಸುತ್ತಿದೆ. ನಿಗಮವು ಈವರೆಗೆ ಮಂಜೂರು ಮಾಡಿರುವ ಕೊಳವೆಬಾವಿಗಳ ವಿವರ ಈ ಕೆಳಕಂಡಂತಿದೆ.

ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ
9030	2152	12768	2358

ಆ) 2003–04ನೇ ಸಾಲಿನಲ್ಲಿ ಸಾಮೂಹಿಕ ನೀರಾವರಿ ಕೊಳವೆ ಯೋಜನೆಯಡಿ/ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆಯಡಿ ಮಂಜೂರು ಮಾಡಿರುವ ಕೊಳವೆ ಬಾವಿಗಳ ವಿವರ:

ಸಾಮೂಹಿಕ ನೀರಾವರಿ ಕೊಳವೆ		ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ	
ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ
221	114	4165	835

5000 ಕೊಳವೆ ಬಾವಿಗಳನ್ನು ಹೆಚ್ಚುವರಿ ಗುರಿಯಲ್ಲಿ ನಿಗದಿಪಡಿಸಲಾಗಿದೆ.

ಕಳೆದ ಸಾಲಿನಲ್ಲಿ ಕೊರೆದ ಬಾವಿಗಳ ಮತ್ತು ವಿದ್ಯುತ್ ಸಂಪರ್ಕ ಕೈಗೊಂಡಿರುವ ವಿವರ ಈ ಕೆಳಕಂಡಂತಿದೆ.

ಕಳೆದ ಸಾಲಿನ ಕೊಳವೆ ಬಾವಿಗಳ ವಿವರ				ವಿದ್ಯುತ್ ಸಂಪರ್ಕಗೊಂಡಿರುವ ವಿವರ			
ಸಾ.ನೀರಾವರಿ		ವೈ.ನಿ.ಕೊ.ಬಾ		ಸಾ.ನೀರಾವರಿ		ವೈ.ನಿ.ಕೊ.ಬಾ	
ಪ.ಜಾ	ಪ.ವ	ಪ.ಜಾ	ಪ.ವ	ಪ.ಜಾ	ಪ.ವ	ಪ.ಜಾ	ಪ.ವ
157	61	1751	659	11	07	108	34

ಈಗಾಗಲೇ ನಾಲ್ಕು ವಿಭಾಗದ ವಿದ್ಯುತ್ ಸರಬರಾಜು ಕಂಪನಿಯ ವ್ಯವಸ್ಥಾಪಕ ನಿರ್ದೇಶಕರೊಡನೆ ಸಭೆ ನಡೆಸಿ ಪ್ರತಿ ಫಲಾನುಭವಿವಾರು ವಿಮರ್ಶೆ ಮಾಡಿ ತ್ವರಿತವಾಗಿ ವಿದ್ಯುದ್ಧಿಕರಣಗೊಳಿಸಲು ಕೋರಲಾಗಿದೆ.

ಇ) ಇಲ್ಲ. ಕೊರೆಯುವ ಯಂತ್ರ ಹಾಗೂ ವಿದ್ಯುತ್ ಉಪಕರಣಗಳೆಲ್ಲವು ಗುತ್ತಿಗೆದಾರರಿಂದ ಸರಬರಾಜಾಗುತ್ತಿದೆ. ರಾಜ್ಯಾದ್ಯಂತ ನೀರಿನ ಮಟ್ಟದ ಹಂತದಲ್ಲಿನ ಕೊರತೆ ಹಾಗೂ ಅಭಾವದ ಅವಧಿಯಲ್ಲಿ ಗುತ್ತಿಗೆದಾರರು ಕೆಲಸವನ್ನು ಕೈಗೆತ್ತಿಕೊಳ್ಳಲು ಹಿಂಜರಿಯುವುದರಿಂದ ಸ್ವಲ್ಪ ವಿಳಂಬವಾಗುತ್ತಿದೆ.

ಉಡುಪಿ ಜಿಲ್ಲೆಯಲ್ಲಿ ಮತ್ಸ್ಯ ಆಶ್ರಯ ಯೋಜನೆಯಡಿಯಲ್ಲಿ ಮನೆ ಮಂಜೂರು

3086 (3480) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಮೀನುಗಾರಿಕೆ ಹಾಗು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2003–04ನೇ ಸಾಲಿನಲ್ಲಿ ಉಡುಪಿ ಜಿಲ್ಲೆಯಲ್ಲಿ ಮತ್ಸ್ಯ ಆಶ್ರಯ ಯೋಜನೆ ಯಡಿಯಲ್ಲಿ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ; (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)

ಆ) ಮನೆಗಳನ್ನು ವಿಧಾನ ಸಭಾ ಕ್ಷೇತ್ರವಾರು ಸಮಾನವಾಗಿ ಹಂಚಲಾಗಿದೆಯೆ; ಇಲ್ಲದಿದ್ದಲ್ಲಿ, ಕಾರಣವೇನು; ಇದರಿಂದ ತಾರತಮ್ಯ ಮಾಡಿದ ಹಾಗೆ ಆಗುವುದಿಲ್ಲವೆ;

ಇ) ಉಡುಪಿ ಜಿಲ್ಲೆಯಲ್ಲಿ ಮತ್ಸ್ಯ ಆಶ್ರಯ ಯೋಜನೆಯಡಿಯಲ್ಲಿ ಮನೆ ಮಂಜೂರಾತಿ ಕೋರಿ ಎಷ್ಟು ಅರ್ಜಿಗಳು ಬಂದಿರುತ್ತವೆ;

ಈ) 2003–04ನೇ ಸಾಲಿನಲ್ಲಿ ಹೆಚ್ಚುವರಿ ಮತ್ಸ್ಯ ಆಶ್ರಯ ಮನೆಗಳನ್ನು ಮಂಜೂರು ಮಾಡಲಾಗುವುದೆ;